ಅ) ಸುರತ್ಕಲ್ ಕ್ಷೇತ್ರದ ಅರಸುಳಿ ಪದವಿನಲ್ಲಿ ದರ್ಖಾಸ್ತು ಕೊಡುವಲ್ಲಿ ಆಗಿರುವ ಕ್ರಮ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಅಕ್ರಮ ಭೂ ಮಂಜೂರಾತಿ ಆಗಿದೆ ಎನ್ನಲಾದ ಬಗ್ಗೆ ತನಿಖೆ ನಡೆಸಿ, ತನಿಖೆ ವರದಿ ಬಂದನಂತರ ಅಕ್ರಮ ನಡೆದಿದ್ದು ಕಂಡು ಬಂದಲ್ಲಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಅಕ್ರಮ ಭೂ ಮಂಜೂರಾತಿ ಆಗಿದೆ ಎನ್ನಲಾದ ಬಗ್ಗೆ ತನಿಖೆ ನಡೆಸಿ, ತನಿಖೆ ವರದಿ ಬಂದನಂತರ ಅಕ್ರಮ ನಡೆದಿದ್ದು ಕಂಡು ಬಂದಲ್ಲಿ , ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ. ಕ. ಜಿಲ್ಲೆಯಲ್ಲಿ ಸರ್ವೆ ಸೆಟಲ್‌ಮೆಂಟ್ ಕಾರ್ಯ ಬಗ್ಗೆ

552 (535) ಡಾಃ ಎಂ.ಪಿ. ಕರ್ಕಿ (ಕುಮಟಾ): ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ವೆ ಸೆಟಲ್‌ಮೆಂಟ್ ಕಾರ್ಯ ಕೊನೆಯ ಬಾಕಿ ಎಂದು ಮಾಡಲಾಯಿತು;

ಆ) ಮರು ಸರ್ವೆ ಸೆಟಲ್‌ಮೆಂಟ್ ಮಾಡುವ ಅವಶ್ಯಕತೆ ಇದೆಯೇ;

ಇ) ಇದ್ದರೆ, ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ವೆಯನ್ನು 1840 ರಿಂದ 1863 ನೇ ಇಸವಿಯವರೆಗೆ ಮತ್ತು ಸೆಟಲ್‌ಮೆಂಟ್ ಕಾರ್ಯವನ್ನು 1965 ರಲ್ಲಿ ಮಾಡಲಾಗಿರುತ್ತದೆ.

ಆ) ಇಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಅಕ್ರಮ - ಸಕ್ರಮ ಸಮಿತಿ ರಚನೆ

553 (836) ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಕ್ರಮ ಸಮಿತಿ ರಚಿಸಿರುವ ಉದ್ದೇಶವೇನು;

ಆ) ಸದರಿ ವ್ಯವಸ್ಥೆ ಅಂಗವಾಗಿ ಹೊಸದಾಗಿ ರೈತರಿಗೆ ಅಕ್ರಮ ಇರುವ ಜಮೀನನ್ನು ಸಕ್ರಮಗೊಳಿಸಲು ಸಾಧ್ಯವೇ;